ಆ)

1. ಬೆಂಗಳೂರು	9. ಕೊಪ್ಪಳ
2. ಮೈಸೂರು	10. ಮುಂಬೈ
3. ತುಮಕೂರು	11. ಕೋಲಾರ
4. ಗದಗ	12. ಚಾಮರಾಜನಗರ
5. ಬೀದರ್	13. ತಿಪಟೂರು
6. ಧಾರವಾಡ	14. ಸಾಗರ
7. ಶಿವಮೊಗ್ಗ	15. ವಿಜಾಪೂರ
8. ಕಾಸರಗೋಡು	16. ಹಾವೇರಿ

ಇ) ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಪುಸ್ತಕ ಮಾರಾಟ ಮಳಿಗೆ ಇರುತ್ತದೆ.

ಈ) ಹೌದು.

ಉ) ಈ ಕುರಿತು ಸಮಗ್ರ ಯೋಜನೆಯೊಂದನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತ ಮಂಡಳಿಯು ರೂಪಿಸುತ್ತಿದ್ದು, ರೂಪರೇಷೆ ಪೂರ್ಣಗೊಂಡ ನಂತರ ಪರಿಶೀಲಿಸಲಾಗುವುದು.

ರಸ್ತೆ ಒತ್ತುವರಿ

2569(2320); ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)

ಅ) ರಸ್ತೆಗಳನ್ನು ಅಕ್ಕಪಕ್ಕದ ರೈತರು ಸಾರ್ವಜನಿಕರು ಒತ್ತುವರಿ ಮಾಡಿ ಬಿತ್ತನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಒತ್ತುವರಿಯಿಂದಾಗಿ ರಸ್ತೆಗಳು ಹಾಳಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಮತ್ತು ಆ) ಮುಧೋಳ ತಾಲ್ಲೂಕಿನಲ್ಲಿ ಕೆಲವು ರಸ್ತೆಗಳನ್ನು ರೈತರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸದರಿ ತಾಲ್ಲೂಕಿನಲ್ಲಿ ರೈತರು ಒತ್ತು ಮಾಡಿರುವ ರಸ್ತೆಗಳನ್ನು ತೆರವುಗೊಳಿಸಲು ಜಿಲ್ಲಾ ಪಂಚಾಯತಿ ವತಿಯಿಂದ ಕ್ರಮ ಜರುಗಿಸಲಾಗಿದೆ.

ರಸ್ತೆ ಅಕ್ಕಪಕ್ಕದ ಹೊಲದವರು ತಮಗೆ ಪರಿಹಾರ ಸಿಕ್ಕಿರುವುದಿಲ್ಲವೆಂದು, ತೆರವುಗೊಳಿಸಲು ತಕರಾರು ಮಾಡುತ್ತಿದ್ದಾರೆಂದು ವರದಿಯಾಗಿದೆ.

ಕಲಾವಿದರ ಮಾಸಾಶನ

2572(3546); ಶ್ರೀ ಗೋವಿಂದ ಎಂ ಕಾರಜೋಳ (ಮುಧೋಳ)

ಅ) ರಾಜ್ಯದಲ್ಲಿ ಮಾಸಾಶನ ಪಡೆಯುತ್ತಿರುವ ಸಂಕಷ್ಟದಲ್ಲಿರುವ ಅಶಕ್ತ ಕಲಾವಿದ ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಕಲಾವಿದರಿಗೆ ಮಾಸಾಶನ ಮಂಜೂರಾತಿ ಮಾಡಲಾಗಿದೆ;

ಇ) ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಕಾರಣದಿಂದಾಗಿ, ಈಗಿರುವ ಮಾಸಾಶನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?